43

# ರೂಪಾಂತರ ಹೊಂದಿದ್ದು

# (17:1-13)

ಅಧ್ಯಾಯ 17, ಉಪಕಥೆಗಳ ಗುಂಪಿನೊಂದಿಗೆ ಮುಕ್ತಾಯವಾಗುತ್ತವೆ (ಅಧ್ಯಾಯಗಳು 14-17) "ಯೇಸುವಿನ ಸೇವೆಗೆ ಇನ್ನೂ ಹೆಚ್ಚಿನ ಪ್ರತಿಕ್ರಿಯೆ" ಎಂದು ನಾಮಕರಣ ಮಾಡಿದ್ದೇವೆ. ಮತ್ತಾಯನು ಪವಿತ್ರಾತ್ಮನ ಪ್ರೇರಣೆಯಿಂದ ಯೇಸುವಿನ ಸುತ್ತಲು ಇದ್ದ ಜನರು ಆತನನ್ನು ಹೇಗೆ ಅವಲೋಕಿಸಿದರು ಮತ್ತು ಆತನು ಯಾರಾಗಿದ್ದಾನೆ ಮತ್ತು ಆತನು ಏನನ್ನು ಮಾಡುತ್ತಿದ್ದಾನೆ ಎಂಬುದಕ್ಕೆ ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ನಮ್ಮ ಎದುರಿನಲ್ಲಿ ಇಡುತ್ತಾನೆ. ನಂತರ, ಮತ್ತಾಯನು ಯೇಸುವಿನ ಭೋಧನಾ ಸೇವೆಯ ಮೇಲೆ ಬೆಳಕನ್ನು ಚೆಲ್ಲುತ್ತಾ ನಾಲ್ಕನೇ ಬೋಧನಾ ವಿಭಾಗವನ್ನು ಮಂಡಿಸುತ್ತಾನೆ (ಅಧ್ಯಾಯ 18).

ಈ ಅಧ್ಯಾಯವು ರೂಪಾಂತರ ಹೊಂದುವದರೊಂದಿಗೆ ಪ್ರಾರಂಭವಾಗುತ್ತದೆ (17:1-13) ಅದರಲ್ಲಿ ಕ್ರಿಸ್ತನ ಮಹಿಮೆ ಪ್ರಕಟವಾಗಿದೆ. ತಪ್ಪಾದ ಮಾರ್ಗಕ್ಕೆ ಎಳೆಯುವ ಉತ್ಸಾಹದಿಂದಾಗಿ ಏನು ಸಂಭವಿಸಿತು ಎಂಬುದಕ್ಕೆ ಪ್ರತಿಕ್ರಿಯಿಸುತ್ತಾ, ಪೇತ್ರನು ಯೇಸುವಿನೊಂದಿಗೆ ಮೋಶೆ ಮತ್ತು ಎಲೀಯನಿಗೆ ಗೌರವವನ್ನು ಸಲ್ಲಿಸಲು ಪ್ರಯತ್ನಿಸಿದನು. ದೇವರು ಪರಲೋಕದಿಂದ ತನ್ನ ಮಗನ ಶ್ರೇಷ್ಟತೆಯನ್ನು ಪ್ರಕಟಿಸುವದರ ಮೂಲಕ ಆ ಸನ್ನಿವೇಶದ ಮೇಲೆ ತೆರೆಯನ್ನು ಎಳೆಯುತ್ತಾನೆ. ಮೂರು ಜನ ಅಪೊಸ್ತಲರಿಗೆ ದೇವರ ಆಜ್ಞೆ, ತನ್ನ ಮಗನನ್ನು ಮಾತ್ರ ಆಲಿಸುವದು ಅವಶ್ಯವಾಗಿದೆ, ಅದು ಕ್ರೈಸ್ತ ಯುಗಕ್ಕೂ ಸಹ ಉಳಿಯುವಂತ ಆಜ್ಞೆಯಾಗಿದೆ.

## ಯೇಸು ಬೆಟ್ಟದ ಮೇಲೆ ಮಹಿಮೆ ಹೊಂದಿದ್ದು (17:1-8)

**1ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಇವನ ತಮ್ಮನಾದ
ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು.
2ಅಲ್ಲಿ ಅವರ ಕಣ್ಣಮುಂದೆ ಆತನ ರೂಪ ಬೇರೆಯಾಯಿತು; ಆತನ ಮುಖವು ಸೂರ್ಯನ
ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು. 3ಇದಲ್ಲದೆ ಮೋಶೆಯೂ
ಎಲೀಯನೂ ಆತನ ಸಂಗಡ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು. 4ಆಗ ಪೇತ್ರನು
ಯೇಸುವಿಗೆ - ಸ್ವಾಮೀ, ನಾವು ಇಲ್ಲೇ ಇರುವದು ಒಳ್ಳೇದು. ಅಪ್ಪಣೆಯಾದರೆ ಇಲ್ಲಿ ಮೂರು
ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು, ಮೋಶೆಗೊಂದು, ಎಲೀಯನಿಗೊಂದು ಎಂದು
ಹೇಳಿದನು. 5ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ
ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ - ಈತನು ಪ್ರಿಯನಾಗಿರುವ ನನ್ನ ಮಗನು;
ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು.
6ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲಬಿದ್ದರು. 7ಆದರೆ ಯೇಸು ಹತ್ತರಕ್ಕೆ
ಬಂದು ಅವರನ್ನು ಮುಟ್ಟಿ - ಏಳಿರಿ, ಹೆದರಬೇಡಿರಿ ಅಂದನು. 8ಅವರು ಕಣ್ಣೆತ್ತಿ ನೋಡಿದಾಗ
ಯೇಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ.**

ದೇವರ ಅನೇಕ ಪ್ರಕಟಿಸುವಿಕೆ ಮತ್ತು ವಿಮೋಚನೆಗೆ ಬೆಟ್ಟದ ತುತ್ತ ತುದಿಗಳು ಸ್ಥಳವನ್ನು ಒದಗಿಸಿಕೊಟ್ಟಿವೆ. ಹಳೆ ಒಡಂಬಡಿಕೆಯಲ್ಲಿ, ಜಲಪ್ರಳಯದ ನಂತರ ನೋಹನು ಮತ್ತು ಆತನ

ನಾವೆ ಅರರಾಟ ಪರ್ವತದ ಮೇಲೆ ನಿಂತಿವು (ಆದಿಕಾಂಡ 8:4). ಮೋಶೆ ಧರ್ಮಶಾಸ್ತ್ರವನ್ನು ಸಿನಾಯಿ ಬೆಟ್ಟದ ಮೇಲೆ ಹೊಂದಿಕೊಂಡನು (ವಿಮೋಚನಕಾಂಡ 24:1, 16; 34:1-5) ಮತ್ತು ವಾಗ್ದತ್ತ ದೇಶವನ್ನು ನೋಬೋ ಪರ್ವತದಿಂದ ವೀಕ್ಷಿಸಿದನು (ಧರ್ಮೋಪದೇಶಕಾಂಡ 34:1-4). ಎಲೀಯನು ಕಾರ್ಮೆಲ್ ಬೆಟ್ಟದ ಮೇಲೆ ಬಾಳನ ಪ್ರವಾದಿಗಳನ್ನು ಎದುರಿಸಿದನು (1 ಅರಸುಗಳು 18:19-40).

ಹೊಸ ಒಡಂಬಡಿಕೆಯಲ್ಲಿ, ಬೆಟ್ಟದ ಮೇಲಿನ ಅನೇಕ ಅನುಭವಗಳು ಯೇಸುವನ್ನು ಒಳಗೊಂಡಿವೆ ಆತನ ಶ್ರೇಷ್ಟವಾದ ಪರ್ವತ ಪ್ರಸಂಗ ಕಪೆರ್ನೌಮಿಗೆ ಸಮೀಪವಿರುವ ಬೆಟ್ಟ ಅಥವಾ ಗುಡ್ಡದ ಮೇಲೆ ಹೇಳಲ್ಪಟ್ಟಿದೆ (ಮತ್ತಾಯ 5-7). ಆಲಿವ್ ಬೆಟ್ಟಗಳಿಗೆ ಒಂದು ಹೆಸರಿಲ್ಲದ ಬೆಟ್ಟದ ಮೇಲಿನಿಂದ ಆತನು ಪರಲೋಕದಲ್ಲಿರುವ ತನ್ನ ತಂದೆಯ ಬಳಿಗೆ ಏರಿಹೋದನು (28:7, 10, 16-20). ಆಲಿವ್ ಬೆಟ್ಟದ ಮೇಲಿನಿಂದ ಆತನು ಪರಲೋಕ ದಲ್ಲಿರುವ ತನ್ನ ತಂದೆಯ ಬಳಿಗೆ ಏರಿಹೋದನು (ಅಪೊಸ್ತಲರ ಕೃತ್ಯಗಳು 1:4-12). ನಮ್ಮ ಪ್ರಸ್ತುತ ಸನ್ನಿವೇಶದಲ್ಲಿ, ಮತ್ತಾಯ 17:1-8, "ದೊಡ್ಡ ಬೆಟ್ಟದ" ಮೇಲೆ ಒಂದು ವಿಶಿಷ್ಟ ಸಂಗತಿ ಸಂಭವಿಸಿತು.

ರೂಪಾಂತರ, ಆತನ ಆತ್ಮೀಯ ಶಿಷ್ಯರ (ಪೇತ್ರನು, ಯಾಕೋಬ, ಮತ್ತು ಯೋಹಾನ), ಅಲ್ಲಿರುವಾಗ, ಪ್ರಾಮುಖ್ಯವಾದ ಸಮಯದಲ್ಲಿ ನಡೆಯಿತು. ಈ ಮುಖ್ಯಾವಾದ ಸಂದರ್ಭ ಬಂದು ಹೋಯಿತು. ಬರುವ ರಾಜ್ಯದ ಕುರಿತು ವಾಗ್ದಾನವು ಕೊಡಲ್ಪಟ್ಟಿತು (16:28), ಈ ರೂಪಾಂತರವು ಪ್ರತ್ಯಕ್ಷ ಸಾಕ್ಷಿಗಳಿಗೆ ಅರಸನ ಮಹಿಮೆಯನ್ನು ಮುಂದಾಗಿ ತಿಳಿಸಿತು. ಇನ್ನೂ ಹೆಚ್ಚಾಗಿ, ದೇವರ ಪ್ರಕಟಿಸುವಿಕೆ ಯೇಸು ದೇವಕುಮಾರನು ಎಂಬ ಪೇತ್ರನ ಅರಿಕೆಯು ಸತ್ಯವಾಗಿದೆ ಎಂಬುದನ್ನು ದೃಢಪಡಿಸಿತು (16:16). ಇನ್ನೂ ಮುಂದಕ್ಕೆ ಬರಲಿಕ್ಕಿರುವ ಆತನ ಮರಣಕ್ಕಿಂತ ಮುಂಚಿತವಾಗಿ (16:21) ಮತ್ತು ಆತನಿಗೆ ಸಂಭವಿಸಲಿಕ್ಕಿರುವ ಶ್ರಮೆಯನ್ನು ತಿಳಿಸುತ್ತದೆ (16:24-26), ಯೇಸುವಿನ ಮಹಿಮೆಯನ್ನು ನೋಡಿದ ಅವರಿಗೆ ಹೆಚ್ಚಿನ ಭರವಸೆಯನ್ನು ನೀಡಿದ್ದರಲ್ಲಿ ಸಂಶಯವಿಲ್ಲ. ದೇವರ ಆಯಲ್ಪಟ್ಟ ಮೆಸ್ಸೀಯನಾಗಿ ಕ್ರೂಜೆಯ ಶ್ರಮೆಯನ್ನು ಅನುಭವಿಸಲಿಕ್ಕಿರುವದರ ದೈವೀಕ ಮಹಿಮೆಯ ನಿಜವಾದ ಸ್ವರೂಪವನ್ನು ರೂಪಾಂತರದ ಮೂಲಕ ಪ್ರದರ್ಶಿಸಲ್ಪಟ್ಟಿತು.[1]

**ವಚನ 1.** ಮತ್ತಾಯ ಮತ್ತು ಮಾರ್ಕ ಇಬ್ಬರು ಕಾಲಾನುಗತಕ್ಕೆ ಸರಿಯಾಗಿ **ಆರು ದಿವಸಗಳಾದ** ನಂತರ **ಆತನು** ಬೆಟ್ಟಕ್ಕೆ ಹೋದಾಗ ರೂಪಾಂತರ ಹೊಂದಿದನು (ಮಾರ್ಕ 9:2). ಲೂಕನು ಹೇಳುವಂತೆ, "ಎಂಟು ದಿನಗಳ ನಂತರ" ಆತನು ಬೆಟ್ಟಕ್ಕೆ ಹೋದಾಗ ಈ ಘಟನೆ ನಡೆಯಿತು ಎಂದು ಹೇಳುತ್ತಾನೆ (ಲೂಕ 9:28). ಈ ಘಟನೆಗಳಲ್ಲಿ ಯಾವುದೇ ವಿರೋಧವಿಲ್ಲ. ಮೊದಲು ಲೂಕನು "ಕೆಲವು" (*hōsei*) ಅಥವಾ "ಸುಮಾರು" (NIV) ಎಂಬ ಪದವನ್ನು ಉಪಯೋಗಿಸಿದ್ದಾನೆ, ಇದು ಆತನು ಸಂಕ್ಷಿಪ್ತವಾಗಿರಲು ಬಯಸುತ್ತಾನೆ ಎಂಬುದನ್ನು ಸೂಚಿಸುತ್ತದೆ. ಎರಡನೆಯದು, ಲೂಕನು ಸಮಯದ ಲೆಕ್ಕವನ್ನು ಮಾಡಲು ಯೆಹೂದ್ಯರ ವಿಧಾನವನ್ನು ಉಪಯೋಗಿಸಿರಬಹುದು; ಆ ಪದ್ಧತಿಯಿಂದ ದಿನದ ಒಂದು ಭಾಗವನ್ನು ಸಂಪೂರ್ಣಭಾಗವೆಂದು ಪರಿಗಣಿಸಲಾಗಿದೆ. ಇತರ ಬರಹಗಾರರು ಕರ್ತನು ಅಪೊಸ್ತಲರಿಗೆ ಪ್ರಕಟಿಸಿಕೊಂಡ ದಿನವನ್ನು ಆತನ ಮರಣಕ್ಕೆ ಸಂಬಂಧಿಸಿದಂತೆ ಅಥವಾ ರೂಪಾಂತರ ಹೊಂದಿದ ನಿರ್ಧಿಷ್ಟವಾದ ದಿವಸಗಗಳ ಮಧ್ಯದಲ್ಲಿ ಕೇವಲ ಆರು ದಿವಸಗಳು ಮಾತ್ರ ಎಂದು ಪರಿಗಣಿಸುತ್ತಾರೆ.

**ಪೇತ್ರ, ಯಾಕೋಬ,** ಮತ್ತು **ಯೋಹಾನರು** ಕರ್ತನ ಆತ್ಮೀಯ ಸಂಗಾತಿಗಳಾಗಿದ್ದರು ಮತ್ತು ಅವರನ್ನು ಆತನ "ಆಪ್ತರ ವರ್ಗ" ಎಂದು ಗುರುತಿಸಲಾಗುತಿತ್ತು. ಮೊದಲು, ಸತ್ತು ಹೋಗಿದ್ದ ಯಾಯಿರನ ಮಗಳನ್ನು ಮರಣದಿಂದ ಎಬ್ಬಿಸಿದಾಗ ಈ ಮೂರು ಅಪೊಸ್ತಲರು ಮಾತ್ರ ಅಲ್ಲಿದ್ದರು (ಲೂಕ 8:41, 42, 51-56). ಮುಂದೆ, ಅವರು ಗೆತ್ಸೆಮನೆ ತೋಟದಲ್ಲಿ

ಆತನ ದೊಡ್ಡ ಸಂಕಟದ ರಾತ್ರಿಯ ಸಮಯದಲ್ಲಿ ಅವರು ಅಲ್ಲಿದ್ದರು (26:36-45). ಯಾಕೆಂದರೆ ಆತನಿಗೆ ಅವರೊಂದಿಗೆ ನಿಕಟವಾದ ಸಂಬಂಧವಿತ್ತು. ಈ ಸಂದರ್ಭದಲ್ಲಿ ಆತನು ತನ್ನ ಮಹಿಮೆಯ ಕುರಿತು ಸಾಕ್ಷಿಯನ್ನು ನೀಡುವದಕ್ಕಾಗಿ ಅವರನ್ನು ಆರಿಸಿಕೊಂಡನು.

ಮಹಿಮೆಯ ಈ ದೃಶ್ಯದ ಸಾಕ್ಷಿಯನ್ನು ನೀಡಲು ಈ ಮೂವರು ಅಪೊಸ್ತಲರಿಗೆ ಮಾತ್ರ ಏಕೆ ಅನುಮತಿಸಲಾಯಿತು? ಕೇವಲ ಅವರು ಮಾತ್ರ ಅರ್ಥಮಾಡಿಕೊಳ್ಳಲು ಶಕ್ತರಾಗಿದ್ದಾರೆ ಮತ್ತು ಆತನ ಸಂಕಟದ ಕುರಿತು ಅನುತಾಪವುಳ್ಳವಾಗಿದ್ದರೆಂದೋ? ಮುಂದಿನ ವ್ಯಾಖ್ಯಾನ ಇದು ನಿಜವಲ್ಲ ಎಂಬುದನ್ನು ಪ್ರಕಟಿಸುತ್ತದೆ (ಲೂಕ 9:33). ಅವರು ಆತನ ಮೊದಲ ಶಿಷ್ಯರಾಗಿದ್ದ ಕಾರಣಕ್ಕಾಗಿ ಅವರಲ್ಲಿ ಇದ್ದರೋ? ಇದಕ್ಕೆ, ನಾವು: ಆಂದ್ರೇಯ, ಫಿಲಿಪ್ಪ, ಮತ್ತು ನಿಕೋದೇಮ ಇವರು ಮೊದಲು ಶಿಷ್ಯರಾಗಿದ್ದರಲ್ಲವೇ ಎಂದು ಕೇಳಬಹುದು (ಯೋಹಾನ 1:35-51)?

ಇವೆಲ್ಲವುಗಳಿಗಿಂತ ಹೆಚ್ಚು ಯುಕ್ತಿ ಪೂರ್ವಕವಾದ ಸಲಹೆ, ವೀಕ್ಷಕರ ಸಂಖ್ಯೆಯನ್ನು ಕಡಿಮೆಯಾಗಿಟ್ಟುಕೊಂಡು, ಸಂಭವಿಸಲಿಕ್ಕಿರುವ ಸರಿಯಾದ ಸಮಯದವರೆಗೆ ಯೇಸುವಿಗೆ ಆ ಘಟನೆಯನ್ನು ತಿರುಗಿ ಹೇಳುವದನ್ನು ಸರಳವಾಗಿ ತಡೆಹಿಡಿಯಬಹುದಾಗಿತ್ತು (ನೋಡಿರಿ 17:9). ಪೇತ್ರನು ನಂತರ ಆ ಘಟನೆಯ ಕುರಿತು, "ನಾವು ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿದ್ದೇವೆ" ಎಂದು ಬರೆಯುತ್ತಾನೆ (2 ಪೇತ್ರ 1:16). ಯೋಹಾನನು ಯೋಹಾನ 1:14ರಲ್ಲಿ "ನಾವು ಆತನ ಮಹಿಮೆ ನೋಡಿದೆವು" ಎಂದು ಬರೆಯುವಾಗ ರೂಪಾಂತರ ಕುರಿತು ಬರೆಯುವದು ಮನಸ್ಸಿನಲ್ಲಿರಬಹುದು. ಯೇಸು ತನ್ನೊಟ್ಟಿಗೆ ಮೂರು ಜನ ಅಪೊಸ್ತಲರನ್ನು ಕರೆದುಕೊಂಡು ಹೋದನು ಎಂಬದು "ಇಬ್ಬರು ಅಥವಾ ಮೂರು ಜನರನ್ನು ಸಾಕ್ಷಿಗಳು" ಇರಬೇಕಾಗಿತ್ತು ಅದಕ್ಕಾಗಿ ಯೇಸು ಅವರನ್ನು ಕರೆದುಕೊಂಡು ಹೋಗಿದ್ದನು (ಧರ್ಮೋಪದೇಶಕಾಂಡ 17:6; 19:15; ಮತ್ತಾಯ 18:16; 2 ಕೊರಿಂಥ 13:1; 1 ತಿಮೋಥೆ 5:19; ಇಬ್ರಿಯ 10:28).

ಮತ್ತಾಯನ ಪ್ರಕಾರ ಯೇಸು ಮತ್ತು ಮೂರು ಶಿಷ್ಯರನ್ನು ಕರೆದುಕೊಂಡು ಹೋದ **ಹತ್ತಿರುವ ಬೆಟ್ಟ ಎತ್ತರವಾಗಿತ್ತು.** ಹಾಗಿದ್ದರೂ, ಯಾವುದೇ ಸುವಾರ್ತೆಯಲ್ಲಿ ಲೇಖಕರು ಸ್ಥಳವನ್ನು ನಿರ್ಧಿಷ್ಟವಾಗಿ ಹೇಳಿಲ್ಲ. ನಂತರ ಪೇತ್ರನು ಈ ಸಂಗತಿಯನ್ನು ಉಲ್ಲೇಖಿಸುವಾಗ ಆತನು ಅದನ್ನು "ಪರಿಶುದ್ಧ ಬೆಟ್ಟ" ಎಂದು ಕರೆದನು (2 ಪೇತ್ರ 1:18). ನಿಶ್ಚಿತವಾದ ಸ್ಥಳವನ್ನು ಗುರಿತಿಸುವದು ಅಸಾಧ್ಯವಾಗಿದೆ.

ಸಂಪ್ರದಾಯವು ಅದು ನಜರೇತಿನಿಂದ 6ಮೈಲು ದೂರದಲ್ಲಿರುವ ಟಾಬೋರ್ ಪರ್ವತ ವಾಗಿತ್ತು ಎಂದು ಹೇಳುತ್ತದೆ. ಈ ಪರ್ವತಕ್ಕೆ ಕರ್ತನ ಭೌಗೋಳಿಕ ಪ್ರಯಾಣದ ಕೊನೆಯ ಸ್ಥಳಕ್ಕೆ ಕೈಸರೆಯ ಫಿಲಿಪ್ಪಿಗೆ ಸುಮಾರು ಮೂರು ದಿನದಷ್ಟು ಪ್ರಯಾಣವಿದೆ (16:13). ಆದಾಗ್ಯೂ ಟಬೋರ್ ಬೆಟ್ಟವು ಸುಮಾರು 1,800 ಅಡಿಗಳಷ್ಟು ಎತ್ತರವಾಗಿದೆ. ಕ್ರಿಸ್ತನ ಸಮಯದಲ್ಲಿ ರೋಮನ್ ಅಂಚೆ ಈ ಟಬೋರ ಬೆಟ್ಟದ ಶಿಖರದ ಮೇಲೆ ಸ್ಥಾಪಿಸಲಾಗಿತ್ತು,[2] ಆ ರೀತಿಯಾಗಿ ಅದು ಕಡಿಮೆಯಾಗಿರುವದರಿಂದ ಆತನು ಅಲ್ಲಿಗೆ ಹೋಗಿರಬಹುದು.

ಅನೇಕರು ಕೈಸರೆಯ ಫಿಲಿಪ್ಪಿಯಿಂದ ಈಶಾನ್ಯಕ್ಕೆ 9,000 ಎತ್ತರದ ಹಿಮಾಛ್ಛಾಧಿತ ಪರ್ವತಗಳಲ್ಲಿ ಹುಟ್ಟಿಕೊಂಡಿರುವ ಹೆರ್ಮೋನ್ ಪರ್ವತದಲ್ಲಿ ಈ ಘಟನೆ ಸಂಭವಿಸಿರುವ ಸಾಧ್ಯತೆಯಿದೆ ಎಂದು ಹೇಳುತ್ತಾರೆ. ಆಗಿದ್ದರೂ, ಕೆಲವರು ಒಂದು ವೇಳೆ ಯೆಹೂದಿ ಶಾಸ್ತ್ರಿಗಳು (ಮಾರ್ಕ 9:14) ಪ್ರಾಮುಖ್ಯವಾಗಿ ಹೆಚ್ಚು ಯೆಹೂದ್ಯ ಜನಸಂಖ್ಯೆರು ಉತ್ತರ ಭಾಗದಲ್ಲಿ ಕಂಡು ಕೊಂಡಿದ್ದಾರೋ ಎಂದು ಪ್ರಶ್ನಿಸುತ್ತಾರೆ.

ಇನ್ನೊಂದು ಸಲಹೆ ಎಂದರೆ ಮೆರಿಕೋನ್ ಪರ್ವತವಾಗಿರಬಹುದು, ಅದು ಗಲಿಲಾಯ ಸಮುದ್ರದಿಂದ ವಾಯುವ್ಯ ದಿಕ್ಕಿಗೆ ಎಂಟು ಮೈಲುಗಳು. ಇದು ಪಾಲಿಸ್ತಾನಲ್ಲಿರುವ ಎತ್ತರವಾದ ಪರ್ವತ ಸುಮಾರು 4,000 ಅಡಿಗಳಷ್ಟು ಎತ್ತರವಾಗಿದೆ. ಯೇಸು ಮತ್ತು ಆತನ ಶಿಷ್ಯರು

ಕೈಸರೆಯ ಫಿಲಿಪ್ಪಿನಿಂದ (16:13) ಕಪೆರ್ನೌಮಿಗೆ ಪ್ರಯಾಣ ಮಾಡುವಾಗ (17:24) ಈ ಮಾರಾನ್ ಬೆಟ್ಟಕ್ಕೆ ಹೋಗಿರಬಹುದು.

**ವಚನ 2.** ಯೇಸು ಪ್ರಾರ್ಥನೆ ಮಾಡಲು ಬೆಟ್ಟವನ್ನು ಹತ್ತಿದನು (ಲೂಕ 9:28). ಆತನು ಪ್ರಾರ್ಥನೆ ಮಾಡುತ್ತಿರುವಾಗ, ಆತನ ಶಿಷ್ಯರ ಎದುರಿನಲ್ಲಿಯೇ **ಆತನು ರೂಪಾಂತರ ಹೊಂದಿದನು.** "ರೂಪಾಂತರ"[3] (*metamorphoō*) ಎಂಬ ಗ್ರೀಕ್ ಶಬ್ದ "metamorphosis" ಎಂಬ ಇಂಗ್ಲೀಷ್ ಪದಕ್ಕೆ ಸಮವಾಗಿದೆ. ಇದನ್ನು ರೋಮಾಪುರ 12:2 ಮತ್ತು 2 ಕೊರಿಂಥ 3:18ರಲ್ಲಿ "ರೂಪಾಂತರಗೊಂಡನು" ಎಂದು ಅನುವಾದಿಸಲಾಗಿದೆ. *Metamorphoō* (ಹೊಸ ರೂಪಕ್ಕೆ ತಿರುಗಿಸು) ಹೊರಗಡೆಯ ಬದಲಾವಣೆ ಅದು ಒಳಗಡೆಯಿಂದ ಬರುತ್ತದೆ ಎಂದು ಸೂಚಿಸುತ್ತದೆ. ಮೋಶೆಯ ವಿಷಯದಲ್ಲಿ ಆದಂತೆ ಯೇಸುವಿನ ಮಹಿಮೆಯು ಪ್ರತಿಫಲಿಸಲಿಲ್ಲ (ವಿಮೋಚನಕಾಂಡ 34:29-35), ಆದರೆ ಅದು ಆತನೊಳಗಿಂದ ಪ್ರಕಾಶಮಾನವಾಯಿತು (ನೋಡಿರಿ ಕೊಲಸ್ಸೆ 1:15; ಇಬ್ರಿಯ 1:3). Michael J. Wilkins ಇದನ್ನು ಭೌತಿಕ ರೂಪಾಂತರ ಎಂದು ವರ್ಣಿಸುತ್ತಾರೆ. ಇದು ಮೊದಲೇ ಸಾಕಾರಗೊಂಡ ಮಹಿಮೆಯ "ಯೇಸುವಿನ ಜ್ಞಾಪಕ ಮಾಡುತ್ತದೆ (ಯೋಹಾನ 1:14; 17:5; ಫಿಲಿಪ್ಪಿ 2:6-7) ಮತ್ತು ಬರಲಿಕ್ಕಿರುವ ಆತನ ಮಹತ್ತನ್ನು (2 ಪೇತ್ರ 1:16-18; ಪ್ರಕಟಣೆ 1:16)," ಆತನ "ದೈವಿಕ ಸ್ವಾಭಾವ ಮತ್ತು ದೇವರಂತೆ ಇರುವ ಆತನ ಮಹಿಮೆ ಪ್ರಕಟಿಸುವಂಥದ್ದಾಗಿದೆ."[4]

**ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು, ಮತ್ತು ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು.** ಲೂಕನ ಪ್ರಕಾರ, "ಆತನ ಮುಖಭಾವವು ಬೇರೆಯಾಯಿತು, ಮತ್ತು ಆತನ ಉಡುಪು ಬೆಳ್ಳಗಾಗಿ ಮಿಂಚುತ್ತಾ ಬಂತು" (ಲೂಕ 9:29) ಎಂದು ಬರೆಯುತ್ತಾನೆ. ಮಾರ್ಕನ ವರ್ಣನೆ "ಆತನ ವಸ್ತ್ರಗಳು ಬಹು ಬೆಳ್ಳಗೆ ಹೊಳೆಯುತ್ತಿದ್ದವು; ಭೂಲೋಕದಲ್ಲಿರುವ ಯಾವ ಅಗಸನಾದರೂ ಅಷ್ಟು ಬೆಳ್ಳಗೆ ಮಾಡಲಾರನು" (ಮಾರ್ಕ 9:3). ಈ ಹೇಳಿಕೆಗಳು ಕರ್ತನ ಮತ್ತು ಆತನ ಬಾಹ್ಯಚಹರೆ ಮತ್ತು ಪರಲೋಕದ ಮೂಲವನ್ನು ಪ್ರಕಟಿಸುವಾಗ ಈ ನಾಟಕೀಯ ಬದಲಾವಣೆಗಳು ಸಂಭವಿಸಿದವು ಎಂಬುದಕ್ಕೆ ಒತ್ತು ನೀಡುತ್ತವೆ (ನೋಡಿರಿ ದಾನಿಯೇಲ 7:9; ಮತ್ತಾಯ 28:3; ಅಪೊಸ್ತಲರ ಕೃತ್ಯಗಳು 1:10; ಪ್ರಕಟಣೆ 1:16; 4:4; 7:13; 10:1).

**ವಚನ 3.** ಲೂಕನ ಸುವಾರ್ತೆಯಲ್ಲಿ ಪ್ರಕಟಿಸಿದಂತೆ, ಮೂರು ಜನ ಅಪೊಸ್ತಲರು ಈ ಘಟನೆಯ ಹೆಚ್ಚಿನ ಭಾಗ ಸಂಭವಿಸುವಾಗ ನಿದ್ರೆ ಮಾಡುತ್ತಿದ್ದರು. ದುಃಖಕರವಾದ ಸಂಗತಿಯೆಂದರೆ ವಿಶ್ವಾಸವಿಟ್ಟಂತೆ ಹಿಂಬಾಲಕರು ಕ್ರಿಸ್ತನ ಜೀವಿತದ ಎರಡು ಪ್ರಾಮುಖ್ಯವಾದ ಘಟನೆ ನಡೆಯುವ ಸಮಯದಲ್ಲಿ ಎಚ್ಚರವಾಗಿರಲಿಲ್ಲ: ಆತನ ರೂಪಾಂತರ ಮತ್ತು ಗೆತ್ಸೆಮನೆ ತೋಟದಲ್ಲಿ ಆತನ ಪ್ರಾರ್ಥನೆಯ ಸಮಯದಲ್ಲಿ (ಲೂಕ 9:30-33; ಮತ್ತಾಯ 26:36-45). ಈ ಸಮಯದಲ್ಲಿ, ಅವರು ಎಚ್ಚರಗೊಂಡಾಗ ತಕ್ಷಣವೇ, ಆಶ್ಚರ್ಯಚಕಿತರಾಗಿ ಅವರು **ಮೋಶೆ ಮತ್ತು ಎಲೀಯಾ** ಯೇಸುವಿನೊಂದಿಗೆ ಮಾತಾಡುತ್ತಿರುವದನ್ನು ನೋಡಿದರು. ಶಿಷ್ಯರು ಅವರನ್ನು ಹೇಗೆ ಗುರುತಿಸಿದರು ಎಂಬುದನ್ನು ಪಠ್ಯವು ಸೂಚಿಸುವದಿಲ್ಲ; ಅದು ಬಹುಶಃ ಅವರ ಸಂಭಾಷಣೆಯಿಂದಾಗಿರಬಹುದು.

ಮೋಶೆ ಮತ್ತು ಎಲೀಯನ ಬಾಹ್ಯಚಹರೆ ಯೇಸುವಿಗೆ ಈ ಸಂದರ್ಭದಲ್ಲಿ ಸಮಂಜಸವಾಗಿತ್ತು. ಮೋಶೆ ಇಸ್ರಾಯೇಲರಿಗೆ ಧರ್ಮಶಾಸ್ತ್ರವನ್ನು ನೀಡಿದ ಶ್ರೇಷ್ಟನಾಗಿದ್ದನು (ನೋಡಿರಿ ಯೆಹೋಶುವ 1:17), ಆದರೆ ಆತನು ತಾನೆ, "ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಎರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು" (ಧರ್ಮೋಪದೇಶ ಕಾಂಡ 18:18) ಎಂದು ಬರೆದಿದ್ದಾನೆ. ಮೋಶೆ, ದೇವರ ಆಜ್ಞೆಗೆ ಅನುಸಾರವಾಗಿ, ನೆಬೊ ಪರ್ವತದ ಮೇಲೆ ಹೋದನು ಮತ್ತು "ಮೋವಾಬ್ ದೇಶದಲ್ಲಿ ಕರ್ತನ ಮಾತಿನಂತೆ

ಸತ್ತನು." ನಂತರ ದೇವರು ಆತನನ್ನು "ಮೋವಾಬ್ ದೇಶದಲ್ಲಿ ಬೇತ್ಪೆಗೋರಿಗೆ ಎದುರಿಗಿರುವ ಕಣಿವೆಯಲ್ಲಿ ಅವನ ದೇಹವನ್ನು ಸಮಾಧಿಮಾಡಿದನು; ಆದರೆ ಇಲ್ಲಿಯವರೆಗೆ ಯಾವ ಮನುಷ್ಯನಿಗೂ ಆತನ ಸಮಾಧಿ ಸ್ಥಳ ತಿಳಿದಿಲ್ಲ" (ಧರ್ಮೋಪದೇಶಕಾಂಡ 34:5, 6).

ಎಲೀಯನು ದೇವರ ಶ್ರೇಷ್ಟ ಪ್ರವಾದಿಗಳಲ್ಲಿ ಒಬ್ಬನಾಗಿದ್ದನು. ಈತನು ಇಸ್ರಾಯೇಲನ ಉತ್ತರ ರಾಜ್ಯದಲ್ಲಿ ಆಹಾಬನ ಆಳ್ವಿಕೆಯ ಸಮಯದಲ್ಲಿ ಬಾಳನ ಆರಾಧನೆಯನ್ನು ವಿರೋಧಿಸಿದ್ದರಿಂದ ಜನಪ್ರಿಯನಾಗಿದ್ದನು (1 ಅರಸುಗಳು 16:29-19:18). ಎಲಿಯನು ಸಾಯದೇ ಇರುವ ಇಬ್ಬರಲ್ಲಿ ಒಬ್ಬನಾಗಿದ್ದಾನೆ.[5] ಬದಲಾಗಿ, ಅವನು ಸುಳಿಗಾಳಿಯೊಂದಿಗೆ ಅಗ್ನಿಮಯವಾದ ರಥರಥಾಶ್ವಗಳೊಂದಿಗೆ ಪರಲೋಕಕ್ಕೆ ಹೋದನು (2 ಅರಸುಗಳು 2:11, 12).

ಮೋಶೆ ಮತ್ತು ಎಲೀಯ ಸಿನಾಯಿ ಬೆಟ್ಟದಲ್ಲಿ ದೇವರ ಪ್ರಕಟಿಸುವಿಕೆಯ ಅನುಭವವನ್ನು ಹೊಂದಿದ್ದರು (ವಿಮೋಚನಕಾಂಡ 24:12-18; 34:1-9; 1 ಅರಸುಗಳು 19:8-12). ಇಬ್ಬರು ಮನುಷ್ಯರ ಹೆಸರುಗಳನ್ನು ಹಳೆ ಒಡಂಬಡಿಕೆಯ ಕೊನೆಯ ವಾಕ್ಯಗಳಲ್ಲಿ ಪ್ರಸ್ತಾಪಿಸಲಾಗಿದೆ: "ನನ್ನ ಸೇವಕನಾದ ಮೋಶೆಯ ನಿಯಮ ವಿಧಿಗಳನ್ನು ಜ್ಞಾಪಕಮಾಡಿಕೊಳ್ಳಿರಿ ... ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು ..." (ಮಲಾಕಿ 4:5, 6). ನಿಜವಾಗಿಯೂ, ಯೆಹೂದ್ಯರು ಮೋಶೆ ಮತ್ತು ಎಲೀಯ ಒಟ್ಟಿಗೆ ತಿರುಗಿಬರುತ್ತಾರೆ ಎಂಬುದನ್ನು ನಿರೀಕ್ಷಿಸುತ್ತಿದ್ದರು.[6] ಈ ಇಬ್ಬರೂ ಹಳೆ ಒಡಂಬಡಿಕೆಯ ಎರಡು ಐತಿಹಾಸಿಕ ಅವಧಿಯ ಪ್ರಾಮುಖ್ಯ ಪ್ರತಿನಿಧಿಗಳಾಗಿದ್ದರು. ಯೇಸುವಿನೊಂದಿಗೆ ಅವರು ಕಾಣಿಸಿಕೊಂಡದ್ದು ನಿಯಮದ ಅಂತ್ಯ ಮತ್ತು ಪ್ರವಾದಿಗಳ ಅಂತ್ಯ ಸಮೀಪವಾಗಿದೆ ಎಂಬುದುರ ಸಂಕೇತವಾಗಿತ್ತು (ನೋಡಿರಿ 5:17, 18; ಲೂಕ 24:44; ರೋಮಾಪುರ 10:4; ಎಫೆಸ 2:14-16).

ಶ್ರೇಷ್ಟರಾದ ಈ ಇಬ್ಬರೂ ಮನುಷ್ಯರು ಯೇಸುವಿನೊಂದಿಗೆ **ಮಾತಾಡುತ್ತಿದ್ದರು.** ಅದೇ ಸಮಯದಲ್ಲಿ ಮತ್ತಾಯನು ಅವರ ಸಂಭಾಷಣೆಯ ತಿರುಳನ್ನು ದಾಖಲಿಸುವದಿಲ್ಲ, ಲೂಕ 9:31, "ಯೆರೂಸಲೇಮಿನಲ್ಲಿ ಆತನು ನೆರವೇರಿಸಬೇಕಾಗಿದ್ದ ಮರಣದ ವಿಷಯವಾಗಿ ಮಾತಾಡುತ್ತಿದ್ದರು" ಎಂದು ಹೇಳುತ್ತದೆ. ಅವರು ಯೇಸುವಿಗೆ ಕಾಣಿಸಿಕೊಳ್ಳಲು ಒಂದು ಕಾರಣವೆಂದರೆ ಯೇಸು ಕ್ರೂಜೆಯ ಮರಣವನ್ನು ಎದುರಿಸುವ ಸಂದರ್ಭದಲ್ಲಿ ಆತನಿಗೆ ಬೆಂಬಲವನ್ನು ನೀಡಲು ಮತ್ತು ಪ್ರೋತ್ಸಾಹಿಸಲು ಕಾಣಿಸಿಕೊಂಡರು. "ಹೋಗುವದು" (*exodos*) ಎಂಬ ಪದವನ್ನು "ಹೋಗುವಾಗ" ಎಂದು ಅನುವಾದಿಸಲಾಗಿದೆ ಇಬ್ರಿಯ 11:22ರಲ್ಲಿ ಮತು 2 ಪೇತ್ರ 1:15 (KJV)ಯಲ್ಲಿ "ಮರಣ" ಎಂದು ಅನುವಾದಿಸಲಾಗಿದೆ.

**ವಚನ 4.** ಮೂರು ಜನ ಶಿಷ್ಯರು ನಿದ್ರೆಯಿಂದ ಎದ್ದಮೇಲೆ, **ಪೇತ್ರನು ಯೇಸುವಿಗೆ, ಸ್ವಾಮಿ, ನಾವು ಇಲ್ಲೇ ಇರುವದು ಒಳ್ಳೆಯದು ಎಂದನು.** ಆತನ ಹವ್ಯಾಸಕ್ಕನುಗುಣವಾಗಿ ಪೇತ್ರನು ತನ್ನ ಗುಂಪಿನ ಪರವಾಗಿ ಮಾತಾಡುವದು - ಈ ಬಾರಿ ಯಾಕೋಬ ಮತ್ತು ಯೋಹಾನರ ಪರವಾಗಿ. ಆತನು ಯೇಸುವಿನೊಂದಿಗಿದ್ದು ಈ ಶ್ರೇಷ್ಟವಾದ ಘಟನೆಗೆ ಸಾಕ್ಷಿಯಾಗಿರುವದು ಸೌಭೌಗ್ಯದ ಸಂಗತಿಯಾಗಿದೆ ಎಂಬುದನ್ನು ಗುರುತಿಸಿದನು. ಉಳಿದ ಒಂಬತ್ತು ಜನ ಶಿಷ್ಯರು ಆಮಂತ್ರಣವಿಲ್ಲದೆ ಇರುವದರಿಂದ ಕಣಿವೆಯ ಕೆಳಗೆ ಇದ್ದರು.

ಪೇತ್ರನು ಮುಂದುವರಿಸಿ, **ಅಪ್ಪಣೆಯಾದರೆ, ಇಲ್ಲಿ ಮೂರು ಪರ್ಣ ಶಾಲೆಗಳನ್ನು ಕಟ್ಟುವೆನು, ನಿನಗೊಂದು, ಮೋಶೆಗೊಂದು, ಎಲೀಯನಿಗೊಂದು, ಎಂದು ಹೇಳಿದನು.** "ಪರ್ಣ ಶಾಲೆಗಳನ್ನು" ಎಂದು ಹೇಳುವಾಗ ಪೇತ್ರನು ಯಾವ ಅರ್ಥದಲ್ಲಿ ಹೇಳಿದನು? ಈ ವಚನದಲ್ಲಿ ಗ್ರೀಕ್ (*skēnē*) ಪದವನ್ನು ಸಹ "ಗುಡಾರಗಳು" (RSV), "ಆಶ್ರಯಗಳು" (NIV), ಮತ್ತು "ಪವಿತ್ರ ಸ್ಥಳಗಳು" (NLT) ಎಂದು ಅನುವಾದಿಸಲಾಗಿದೆ.

"ಗುಡಾರಗಳು." ಪರ್ಣಶಾಲೆಗಳ ಹಬ್ಬದ ಸಮಯದಲ್ಲಿ, ಅಥವಾ ಗುಡಾರಗಳು, ಅಡವಿಯಲ್ಲಿ ನಲವತ್ತು ವರ್ಷಗಳ ಕಾಲ ಅವರ ಪ್ರಯಾಣದಲ್ಲಿ ಅವರು ಗುಡಾರಗಳಲ್ಲಿ ವಾಸಿಸುತ್ತಿದ್ದುದರ ನೆನಪಿಗಾಗಿ ಆಚರಿಸುತ್ತಿದ್ದರು (ಯಾಜಕಕಾಂಡ 23:33-44).

ಹಬ್ಬದಲ್ಲಿ ಭಾಗಿಗಳಾದ ಪ್ರತಿಯೊಂದು ಕುಟುಂಬದವರು ಆ ವಾರದಲ್ಲಿ ಗುಡಾರಗಳನ್ನು ನಿರ್ಮಿಸಿ ಅವುಗಳಲ್ಲಿ ವಾಸಿಸುತ್ತಿದ್ದರು. ಗುಡಾರಗಳ ಹಬ್ಬವನ್ನು ಅಕ್ಟೋಬರ್ ತಿಂಗಳಿನಲ್ಲಿ ಆಚರಿಸುತ್ತಿದ್ದರು. ಹಬ್ಬವನ್ನು ಆಚರಿಸುವದಕ್ಕಾಗಿ ಪೇತ್ರನು ಪರ್ಣಶಾಲೆಗಳನ್ನು ಕಟ್ಟುವೆನು ಎಂದು ಹೇಳಿದನೋ? ಹಾಗಿದ್ದಲ್ಲಿ ರೂಪಾಂತರ ಯೆಹೂದ್ಯರ ಪಂಚಾಗಕ್ಕೆ ಅನುಸಾರವಾಗಿ ಅಕ್ಟೋಬರ್ ತಿಂಗಳಿನಲ್ಲಿ ಸಂಭವಿಸಿತು, ಪಸ್ಕ ಹಬ್ಬ ಮತ್ತು ಕರ್ತನ ಕ್ರೂಜೆಯ ಮರಣಕ್ಕೆ ಆರು ತಿಂಗಳು ಪೂರ್ವದಲ್ಲಿ ಸಂಭವಿಸಿತು. ಏನೇ ಆದರೂ, ಈ ಅಧ್ಯಾಯದಲ್ಲಿ ಬರುವ ಕರ ಸಂಗ್ರಹ ವರ್ಷದ ಈ ಸಮಯದ ಕುರಿತು ವಾದಿಸುತ್ತದೆ (17:24ರ ಮೇಲಿನ ವ್ಯಾಖ್ಯಾನ ನೋಡಿರಿ).

"ಆಶ್ರಯಗಳು." ಮೋಶೆ ಮತ್ತು ಎಲೀಯನು ಯೇಸುವಿನೊಂದಿಗೆ ಉಪಸ್ಥಿತರಿದ್ದರಿಂದ (ಲೂಕ 9:33), ಬಹುಶಃ ಪೇತ್ರನು ಸಲಹೆ ಬೆಟ್ಟದ ಮೇಲೆ ಒಂದು ರಾತ್ರಿಯನ್ನು ಕಳೆಯಲು ಲಭ್ಯವಿರುವ ಕೊಂಬೆ ಮತ್ತು ಎಲೆಗಳಿಂದ ತಾತ್ಕಲಿಕವಾದ ಆಶ್ರಯಗಳನ್ನು ಕಟ್ಟುವದಾಗಿರಬಹುದು. ಆತನ ಸಲಹೆಗೆ ಈ ಅರ್ಥವಿದ್ದಲ್ಲಿ, ಆತನ ಸಲಹೆ ಅತಿಥಿಸತ್ಕಾರ ಮಾಡುವದಾಗಿತ್ತು. ಅವನು ಬೆಟ್ಟದ ಮೇಲೆ ಅವರ ಇರುವಿಕೆಯನ್ನು ವಿಸ್ತರಿಸಿ ಅವರ ಬೋಧನೆಯಿಂದ ಲಾಭವನ್ನು ಹೊಂದುವದಾಗಿರಬಹುದು.

"ಪವಿತ್ರ ಸ್ಥಳಗಳು." ಪರ್ಣಶಾಲೆ, ಬೆಟ್ಟಿಯಾಗುವ ಗುಡಾರಗಳು ಎಂದು ಸಹ ಕರೆಯುತ್ತಿದ್ದರು, ಅಡವಿಯಲ್ಲಿ ಇಸ್ರಾಯೇಲರು ದೇವರನ್ನು ಆರಾಧಿಸಿದ ಸ್ಥಳವಾಗಿತ್ತು (ವಿಮೋಚನಕಾಂಡ 25:1-27:21). ಅದು ದೇವರ ಮಹಿಮೆಗಾಗಿ - ಮತ್ತು ಗೌರವಕ್ಕಾಗಿ ಕಟ್ಟಲ್ಪಡುತ್ತಿತ್ತು. ಅದೇ ರೀತಿಯಾಗಿ, ಬಹುಶಃ ಪೇತ್ರನು ಯೇಸು, ಮೋಶೆ ಮತ್ತು ಎಲೀಯನಿಗೆ ಗೌರವವನ್ನು ಸಲ್ಲಿಸಲು ಮೂರು ಪವಿತ್ರ ಸ್ಥಳಗಳನ್ನು ಕಟ್ಟಬೇಕೆಂದು ಅವನು ಆಲೋಚಿಸಿರಬಹುದು, ಅದರಿಂದ ಈ ಮೂರು ಜನರು ಒಂದು ರೀತಿಯಲ್ಲಿ ಮಹಿಮೆಯುಳ್ಳ ವ್ಯಕ್ತಿಗಳಾಗಿದ್ದರು (ಲೂಕ 9:32), ಪೇತ್ರನು ಮೂವರನ್ನು ಸಮಾನರನ್ನಾಗಿ ನೋಡಿದನು ಮತ್ತು ಆತನು ಪ್ರತಿಯೊಬ್ಬರನ್ನು ಒಂದೇ ರೀತಿಯಲ್ಲಿ ಗೌರವಿಸಬೇಕೆಂದು ಹೇಳಿದನು.

ಪೇತ್ರನ ಪ್ರೇರೇಪಣೆ ಏನೇ ಆಗಿದ್ದರೂ, ಆತನ ಬೇಡಿಕೆ ತಪ್ಪಾಗಿತ್ತು, "ತಾನಂದದ್ದು ತನಗೇ ಗೊತ್ತಾಗಲಿಲ್ಲ" ಎಂದು ಲೂಕನ ಸುವಾರ್ತೆ ಹೇಳುತ್ತದೆ (9:33). ಮಾರ್ಕನು, "ಏನು ಹೇಳಬೇಕೋ ತಿಳಿಯದೆ ಹೀಗೆ ಮಾತಾಡಿದನು" ಎಂದು ಹೇಳುತ್ತಾನೆ (ಮಾರ್ಕ 9:6). ಪೇತ್ರನು ಆ ಕ್ಷಣದ ಭಾವನೆಯಲ್ಲಿ ಎಷ್ಟು ತಲ್ಲೀನನಾಗಿದ್ದನೆಂದರೆ ಅವನು ಆಲೋಚಿಸದೆ ಮಾತನಾಡಿದನು. ಯಥಾರ್ಥವಾದ ಭಾವನೆಗಳು ಯೋಗ್ಯವಾಗಿರುತ್ತವೆ, ಒಬ್ಬನು ಭಾವನೆಗಳು ತನ್ನ ಉದ್ದೇಶವನ್ನು ಆಳಲು ಅನುಮತಿಸಬಾರದು.

**ವಚನ 5. ಆತನು ಇನ್ನು ಮಾತಾಡುತ್ತಿರುವಾಗಲೇ** ಎಂಬ ವಾಕ್ಯಭಾಗವು ಪೇತ್ರನು ಮಾತಾಡುವಾಗ ಅಡಚಣೆಗೊಳಗಾದನು ಎಂದು ಸೂಚಿಸುತ್ತದೆ. ದೇವರು ಮಾತಾಡುವಾಗ ಅದು ಅದ್ಭುತವಾದ ದೃಶ್ಯವಾಗಿತ್ತು: ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಸತ್ಯವೇದದಲ್ಲಿ ಉಪಯೋಗಿಸದೇ ಹೋಗಿದ್ದಾಗಲೂ, ಮೋಡದ ಈ ಚಮಾತ್ಕರ ಯಾವಾಗಲೂ ಪ್ರಕಾಶಮಾನವಾದ ಬೆಳಕು ಮತ್ತು ಹೊಗೆಯೊಂದಿಗೆ ಕಾಣಿಸಿಕೊಳ್ಳುತ್ತಿತ್ತು,[7] ಇದನ್ನು ಯೆಹೂದ್ಯ ಪಂಡಿತರು ನಂತರದಲ್ಲಿ "Shekinah" ಎಂದು ಕರೆದರು. ಮೋಡ ಈ ಚಮಾತ್ಕಾರವು ಯಾವಾಗಲು ದೇವರ ಪ್ರಸನ್ನತೆಯನ್ನು ಸೂಚಿಸುತ್ತದೆ. ಪೇತ್ರನು ಸೂಚಿಸಿದ[8] ಕೊಂಬೆಗಳು ಮತ್ತು ಎಲೆಗಳಿಂದ ಮಾಡಿದ ಆಶ್ರಯಸ್ಥಾನಕ್ಕಿಂತ ಮೋಡಗಳು ಹೆಚ್ಚು ಮಹಿಮೆಯಿಂದ ಕೂಡಿದ ಹೊದಿಕೆಗಳಾಗಿದ್ದವು. ಕ್ರೈಸ್ತ ಯುಗದಲ್ಲಿ, ದೇವರು ಮನುಷ್ಯರೊಟ್ಟಿಗೆ ಯೇಸುವಿನ ಮೂಲಕ ಮಾತನಾಡುತ್ತಾನೆ, ಆತನು ವಿಶೇಷವಾಗಿ ಆಯ್ದುಕೊಂಡಿರುವ ವಕ್ತಾರನಾಗಿದ್ದಾನೆ.[9]

ದೇವರ **ಧ್ವನಿಯು** ಮೋಡಗಳ ಮೂಲಕ **ಗುಡುಗಿ**ನಂತೆ ಕೇಳಿಸಿತು, **ಈತನು**

**ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು!** ಪೇತ್ರನು ನಂತರ ಈ ಬೆಟ್ಟದ ಮೇಲೆ ಬರೆದನು, "ಯೇಸು ತಂದೆಯಾದ ದೇವರಿಂದ ಮಹಿಮೆ ಮತ್ತು ಗೌರವ ಸ್ವೀಕರಿಸಿದನು." ಅಪೊಸ್ತಲನು ದೇವರ ಪ್ರಕಟಣೆಯನ್ನು ಮೋಡದಿಂದ ಬಂದಿರುವದು "ಸರ್ವೋತ್ಕೃಷ್ಟ ಪ್ರಭಾವವೆಂದು" ವರ್ಣಿಸಿದ್ದಾನೆ (2 ಪೇತ್ರ 1:17). ತಂದೆಯು ಮೋಶೆ ಎಲೀಯ ಮತ್ತು ಯೇಸು ಸಮಾನರಲ್ಲ ಎಂಬುದನ್ನು ಪ್ರಕಟಿಸುತ್ತದೆ. ಕ್ರಿಸ್ತನು ದೇವರ ಮಗನಾಗಿ, ದೇವರಾಗಿದ್ದಾನೆ ಒಂದು ಹೇಳಿಕೆ ಏನೆಂದರೆ ಮೋಶೆ, ಎಲೀಯಾ, ಮತ್ತು ಯೇಸು ಎಲ್ಲರೂ ಸಹ ಸಮವಲ್ಲವೆಂದು ಹೇಳಿದ್ದಾನೆ. ಕ್ರಿಸ್ತನು ದೇವರು ಮಗನಾಗಿ ದೇವರಾಗಿದ್ದಾನೆ. ಈ ಪ್ರಕಟನೆ, ಹ್ಯಾಗೂ, ದೇವರ ಯೇಸುವಿನ ದೀಕ್ಷಾಸ್ನಾನದ ಸಮಯದಲ್ಲಿ ಹೇಳಿದ್ದನ್ನು ಮೀರಿಸುವ ಹಾಗಿತ್ತು (ನೋಡಿರಿ 3:17ರ ಮೇಲಿನ ವ್ಯಾಖ್ಯಾನ). ಆತನು, "ಈತನ ಮಾತನ್ನು ಕೇಳಿರಿ!" ಈ ಎಚ್ಚರಿಕೆ ವಿಶೇಷವಾಗಿ ಪೇತ್ರನಿಗಾಗಿ ಸಂಬಂಧಪಡುವಂಥದ್ದು, ಯಾಕೆಂದರೆ ಯೇಸು ತನ್ನ ಶ್ರಮೆಯನ್ನು ಪ್ರವಾದಿಸಿದಾಗ ಪೇತ್ರನು ಆತನನ್ನು ಗದರಿಸಿದ್ದನು (16:21-23). ಯೇಸು ಅಧಿಕಾರವನ್ನು ಹೊಂದಿದ ಪ್ರವಾದಿ ಆತನ ಮಾತುಗಳನ್ನು ಆಲಿಸಬೇಕು (ಧರ್ಮೋಪದೇಶಕಾಂಡ 18:15, 19; ಅಪೊಸ್ತಲರ ಕೃತ್ಯಗಳು 3:22, 23; 7:37). ಆತನು ಮಾತ್ರ ಇಂದು ದೇವರ ವಕ್ತಾರನಾಗಿದ್ದಾನೆ (ಇಬ್ರಿಯ 1:1, 2). ಅಂತ್ಯಕಾಲದಲ್ಲಿ, "ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ಕಾಣಿಸಿಕೊಳ್ಳಬೇಕು" ಅವರು ತಮ್ಮ ಫಲವನ್ನು ಅಲ್ಲಿ ಸ್ವೀಕರಿಸುವರು (2 ಕೊರಿಂಥ 5:10).

**ವಚನ 6.** ದೇವರ ಅದ್ಭುತವಾದ ಪ್ರಸನ್ನತೆ ಪೇತ್ರ, ಯಾಕೋಬ ಮತ್ತು ಯೋಹಾನರಿಂದ ಸ್ವಾಭಾವಿಕ ಪ್ರತಿಕ್ರಿಯೆಯನ್ನು ತಂದಿತು: **ಅವರು ಬಹಳವಾಗಿ ಹೆದರಿ ಬೋರಲು ಬಿದ್ದರು.** ಯಾರ ಮುಂದೆಯಾದರು ಬೋರಲುಬೀಳುವದು ಶ್ರೇಷ್ಟವಾದ ದೀನತೆ ಮತ್ತು ಗೌರವವನ್ನು ಸೂಚಿಸುತ್ತದೆ. ಜನರು ದೇವರನ್ನು ಅಥವಾ ಆತನ ಪ್ರತಿನಿಧಿಯನ್ನು ಸಂದಿಸುವಾಗ ಅನೇಕ ವರ್ತಿ ಬೋರಲು ಬೀಳುತ್ತಿದ್ದರು (ಆದಿಕಾಂಡ 17:3; ಯಾಜಕಕಾಂಡ 9:24; ಯೆಹೋಶುವ 5:14; ನ್ಯಾಯಸ್ಥಾಪಕರು 13:20; 1 ಅರಸುಗಳು 18:39; ಯೆಹೆಜ್ಕೇಲನು 1:28; 3:23; 43:3; 44:4). ಮೂರು ಜನ ಶಿಷ್ಯರು ಬೋರಲು ಬೀಳುವದರೊಂದಿಗೆ ಭಯದಿಂದ ಕೂಡಿದ್ದರು. ಅವರು ನಿಜವಾಗಿಯೂ - ಆಕಸ್ಮಾತಾಗಿ ಸಹ - ದೇವರ ಮಹಿಮೆಯನ್ನು - ದೃಷ್ಟಿಸಿದಾಗ ಮರಣವನ್ನು ನಿರೀಕ್ಷಿಸಿದ್ದರು (ನೋಡಿರಿ ನ್ಯಾಯಸ್ಥಾಪಕರು 6:22, 23; 13:20-22).

**ವಚನ 7. ಯೇಸು ಹತ್ತರಕ್ಕೆ ಬಂದು ಅವರನ್ನು ಮುಟ್ಟಿ - ಏಳಿರಿ, ಹೆದರಬೇಡಿರಿ ಅಂದನು.** ಯೇಸು ಅವರನ್ನು ಮುಟ್ಟುವದರೊಂದಿಗೆ ಸಮಾಧಾನ ಮಾಡಿದನು (ನೋಡಿರಿ 8:3, 15; 9:20, 25, 29; 14:36; 20:34) ಮತ್ತು ನಂತರ ಪ್ರೋತ್ಸಾಹದ ನುಡಿಗಳ ಮೂಲಕ ಸಮಾಧಾನಪಡಿಸಿದನು (ನೋಡಿರಿ 9:2, 22; 14:27; 28:10). ಪ್ರಕಟಣೆ 1:17ರ ವಚನವು 6 ಮತ್ತು 7ಕ್ಕೆ ಸಮಾನಾಂತರವಾಗಿ ಕಂಡುಬರುತ್ತದೆ. ಯೋಹಾನನು ಕ್ರಿಸ್ತನ ದರ್ಶನವನ್ನು ಹೊಂದಿದಾಗ, ಆತನು "ಸತ್ತವನಂತೆ ಕ್ರಿಸ್ತನ ಪಾದಕ್ಕೆ ಬಿದ್ದನು." ಅದಕ್ಕೆ ಪ್ರತಿಕ್ರಿಯಿಸಿ, ಯೇಸು ತನ್ನ ಬಲಗೈಯನ್ನು ಯೋಹಾನನ ಮೇಲೆ ಇಟ್ಟು ಹೆದರಬೇಡ ಎಂದು ಹೇಳಿದನು.

**ವಚನ 8.** ಯೇಸು ಅವರಿಗೆ ಪುನಃ ಭರವಸೆಯನ್ನು ನೀಡಿದ ನಂತರ, **ಅವರು ಕಣ್ಣೆತ್ತಿ ನೋಡಿದಾಗ ಯೇಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ.** NASB ಗ್ರೀಕ್ ಪಠ್ಯದಲ್ಲಿ ಪ್ರತಿಕ್ರಿಯಿಸುವ ಪ್ರಕಾರ, ಎಲ್ಲಾ ಪದಗಳನ್ನು ಒಟ್ಟಿಗೆ ಸೇರಿಸಿ ಯೇಸು ತಾನೇ ಎಂಬ ಪದಕ್ಕೆ ಒತ್ತು ನೀಡಲಾಗಿದೆ. ಮೋಡವು ದೇವರ ದೈವೀಕ ಪ್ರಸನ್ನತೆಯನ್ನು ತೆಗೆಯಿತು. ಮೋಶೆ ಮತ್ತು ಎಲೀಯ ಕಾಣದೇ ಹೋದರು ಎಂಬುದನ್ನು ಸೂಚಿಸುತ್ತದೆ. ಶಿಷ್ಯರು ಯೇಸುವನ್ನು ಮಾತ್ರ

ನೋಡಿದಾಗ ನಿರಾಳವಾದರು ಎಂಬುದರಲ್ಲಿ ಸಂಶಯವಿಲ್ಲ.

## ಎಲೀಯನ ಕುರಿತು ಶಿಷ್ಯರ ಪ್ರಶ್ನೆ (17:9-13)

**9ಅವರು ಆ ಬೆಟ್ಟದಿಂದ ಇಳಿದುಬರುತ್ತಿರುವಾಗ ಯೇಸು ಅವರಿಗೆ - ನೀವು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವ ತನಕ ಯಾರಿಗೂ ಹೇಳಬೇಡಿರೆಂದು ಖಂಡಿತವಾಗಿ ಹೇಳಿದನು. 10ಆಗ ಆತನ ಶಿಷ್ಯರು ಎಲೀಯನು ಮೊದಲು ಬರುವದು ಅಗತ್ಯವೆಂಬುದಾಗಿ ಶಾಸ್ತ್ರಿಗಳು ಹೇಳುತ್ತಾರಲ್ಲಾ, ಇದು ಹೇಗೆ ಎಂದು ಆತನನ್ನು ಕೇಳಿ ದ್ದಕ್ಕೆ ಆತನು - 11ಎಲೀಯನು ಬರುವದು ನಿಜ; ಬಂದು ಎಲ್ಲವನ್ನು ತಿರಿಗಿ ಸರಿಮಾಡುವನು;**
**12ಆದರೆ ನಾನು ನಿಮಗೆ ಹೇಳುವದೇನೆಂದರೆ, ಎಲೀಯನು ಬಂದು ಹೋದನು; ಜನರು ಅವನ ಗುರುತು ಅರಿಯದೆ ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು. ಅವನಿಗಾದಂತೆ ಮನುಷ್ಯಕುಮಾರನಿಗೆ ಸಹ ಅವರ ಕಡೆಯಿಂದ ಹಿಂಸೆಯಾಗುವದು ಎಂದು ಉತ್ತರಕೊಟ್ಟನು.**
**13ಆಗ ಸ್ನಾನಿಕನಾದ ಯೋಹಾನನ ವಿಷಯವಾಗಿ ತಮಗೆ ಈ ಮಾತನ್ನು ಹೇಳಿದನೆಂದು ಶಿಷ್ಯರು ತಿಳುಕೊಂಡರು.**

**ವಚನ 9.** ಸಹಜವಾಗಿ, **ಯೇಸು** ಮತ್ತು ಮೂವರು ಶಿಷ್ಯರು ರಾತ್ರಿಯನ್ನು ಬೆಟ್ಟದ ಮೇಲೆ ಕಳೆದರು, ಲೂಕ 9:37ರಲ್ಲಿ, "ಅವರು ಬೆಟ್ಟದಿಂದ ಕೆಳಗಿಳಿದು ಬಂದರು." "ಮರುದಿನ" ಅವರು ಕೆಳಗೆ ಇಳಿಯುತ್ತಿರುವಾಗ, **ನೀವು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವ ತನಕ ಯಾರಿಗೂ ಹೇಳಬೇಡಿರಿ ಎಂದು ಖಂಡಿತವಾಗಿ ಹೇಳಿ ದನು.** ತನ್ನ ಕಾರ್ಯವನ್ನು ಮಾಡುತ್ತಿರುವದರಿಂದ, ಕರ್ತನು ಅವರಿಗೆ ಈ ಅದ್ಭುತದ ಕುರಿತು ಮತ್ತು ಆತನು ಕ್ರಿಸ್ತನು ಎಂದು ಗುರುತಿಸುವದರ ಕುರಿತು ಮೌನವಾಗಿರಲು ಆಜ್ಞಾಪಿಸಿದನು (ನೋಡಿರಿ 8:4; 9:30; 12:16; 16:20). ರೂಪಾಂತರದ ಜ್ಞಾನವನ್ನು ಹರಡುವದು ಹೆಚ್ಚು ಯೆಹೂದ್ಯರಿಗೆ ಲಾಭದಾಯಕವಾಗಿರಲಿಲ್ಲ, ಯಾಕೆಂದರೆ ಅವರು ಲೌಕಿಕವಾದ ರಾಜ್ಯವನ್ನು ಆಳುವ ಸೈನಿಕ ಮೆಸ್ಸೀಯನನ್ನು ಎದುರುನೋಡುತ್ತಿದ್ದರು. ಅವರು ಈ ಸಂಗತಿಯನ್ನು ತಪ್ಪಾಗಿ ಅರ್ಥೈಸುವದರಲ್ಲಿ ಸಂಶಯವಿರಲಿಲ್ಲ. ಆದರೂ, ಕ್ರಿಸ್ತನ ಪುನರುತ್ಥಾನದ ನಂತರ, ರೂಪಾಂತರದ ಸಾಕ್ಷಿ ಕೆಲವೊಂದು ಸತ್ಯಗಳನ್ನು ಬಹಿರಂಗಪಡಿಸುತ್ತದೆ: (1) ಯೇಸುವಿನ ದೈವತ್ವ, (2) ಕ್ರೂಜೆಯ ಮೇಲೆ ಪ್ರಾಣವನ್ನು ಅರ್ಪಿಸುವ ಆತನ ಸ್ವ-ಇಚ್ಛೆ, (3) ಪರಲೋಕ ದಲ್ಲಿ ಆತನ ಆತ್ಮೀಕವಾದ ಆಳ್ವಿಕೆ ಮತ್ತು (4) ತಿರುಗಿ ಬರಲಿಕ್ಕಿರುವ ಆತನ ವಾಗ್ದಾನದ ಖಚಿತತೆ (2 ಪೇತ್ರ 1:16-18).

"ದರ್ಶನ" (*horama*) ಎಂಬ ಪದಕ್ಕೆ ಗ್ರೀಕ್ ಪದ ರೂಪಾಂತರದ ನೈಜತೆಯನ್ನು ಕಡಿಮೆ ಮಾಡುವದಿಲ್ಲ. ಅದೇ ಸಮಯದಲ್ಲಿ ಅನೇಕಾವರ್ತಿ ಹೊಸ ಒಡಂಬಡಿಕೆಯಲ್ಲಿ "ದರ್ಶನವನ್ನು" ಉಪಯೋಗಿಸಲಾಗಿದೆ (ಅಪೊಸ್ತಲರ ಕೃತ್ಯಗಳು 9:10; 10:3; 11:5; 12:9; 16:9; 18:9), ಇದು "ಕಣ್ಣಿಗೆ ಕಾಣಿಸುವದನ್ನು" ಸೂಚಿಸುತ್ತದೆ. ಈ ಪದವನ್ನು ಅಪೊಸ್ತಲರ ಕೃತ್ಯಗಳು 7:31ರಲ್ಲಿ ಉರಿಯುವ ಪೊದೆಗೆ ಉಪಯೋಗಿಸಲಾಗಿದೆ, ಮೋಶೆ, "ಆ ನೋಟಕ್ಕೆ ಆಶ್ಚರ್ಯಗೊಂಡನು" ಎಂದು ಹೇಳುತ್ತದೆ (ನೋಡಿರಿ ವಿಮೋಚನಕಾಂಡ 3:3). NIV ಅನುವಾದದಲ್ಲಿ ವಚನ 9 ಹೇಳುತ್ತದೆ, "ನೀನು ನೋಡಿದ್ದನ್ನು ಯಾರಿಗೂ ಹೇಳಬೇಡಿರಿ."

ಮತ್ತೊಂದು ಸಾರಿ, ಬರಲಿಕ್ಕಿರುವ ತನ್ನ ಮರಣ ಮತ್ತು ಪುನರುತ್ಥಾನದ ಕುರಿತು ಹೇಳುತ್ತಾನೆ (ನೋಡಿರಿ 16:21). ಆದರೂ, ಆತನ ಮಾತುಗಳು ಹೆಚ್ಚು ಸ್ಪಷ್ಟವಾಗಿ ಆತನ ಪುನರುತ್ಥಾನವನ್ನು ಸೂಚಿಸುತ್ತವೆ. ಆತನು ತನ್ನ ಶಿಷ್ಯರನ್ನು ತನ್ನ ಶ್ರಮೆ ಮತ್ತು ಮರಣಕ್ಕಿಂತ

ಹೆಚ್ಚಾಗಿ ಸಮಾಧಿಯ ಮೇಲೆ ತಾನು ಹೊಂದಲಿರುವ ಜಯದತ್ತ ತಿರುಗಿಸುತ್ತಿದ್ದಾನೆ.

**ವಚನ 10.** ಮೋಶೆ ಮತ್ತು ಎಲೀಯಾ ಕಾಣಿಸಿಕೊಂಡಿರುವದರ ಅರ್ಥ **ಶಿಷ್ಯರಿಗೆ** ಖಚಿತವಾಗಿರಲಿಲ್ಲ ಆದುದರಿಂದ ಅವರು ಕೇಳಿದರು, **ಹಾಗಾದರೆ ಎಲೀಯನು ಮೊದಲು ಬರುವದು ಅಗತ್ಯವೆಂದು ಶಾಸ್ತ್ರೀಗಳು ಯಾಕೆ ಹೇಳುತ್ತಾರೆ?** ಎಂದು ಕೇಳಿದರು. ಅವರ ಪ್ರಶ್ನೆ ಮಲಾಕಿ 4:5ರಲ್ಲಿ ಇರುವ ಪ್ರವಾದನೆಗೆ ಸಂಬಂಧಪಟ್ಟಿದೆ: "ಯೆಹೋವನ ಆಗಮನದ ಭಯಂಕರವಾದ ಮಹಾ ದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು." ಈ ವಾಕ್ಯಭಾಗದ ಆಧಾರಿಸಿ, ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು. ಈ ವೇದಭಾಗವನ್ನು ಆಧರಿಸಿ, ಶಾಸ್ತ್ರಿಗಳು ನಿಜವಾಗಿಯೂ ನಿಶ್ಚಯವಾಗಿ ಬರುವನು ಎಂದು ಬೋಧಿಸಿದರು.[10] ಒಂದು ವೇಳೆ, "ಮೊದಲು" ಎಂದರೆ ಶಿಷ್ಯರು ನ್ಯಾಯತೀರ್ಪಿನ ದಿನಕ್ಕಿಂತ ಮೊದಲು ಎಂದು ಅರ್ಥೈಸಿದ್ದರು, ನಂತರ ಅವರು ರೂಪಾಂತರ ಆ ಪ್ರವಾದನೆಯ ನೇರವೇರಿಕೆಯಾಗಿರಬಹುದು ಎಂದು ಆಶ್ಚರ್ಯಚಕಿತರಾದರು. ಇನ್ನೊಂದು ಸಾಧ್ಯತೆ ಎಂದರೆ ಎಲೀಯನು "ಮೊದಲು" ಮೆಸ್ಸೀಯ ನಿಗಿಂತ[11] ಮೊದಲು ಎಂದು ಬೋಧಿಸಲ್ಪಟ್ಟಿದ್ದರು. ಈ ಸನ್ನಿವೇಶದಲ್ಲಿ, ಅವರು ಯೇಸುವಿನ ಬರೋಣ ಬೆಟ್ಟದ ಮೇಲೆ ಎಲೀಯನಿಗಿಂತ ಮುಂಚಿತವಾಗಿ ಏಕೆ ಆಯಿತು ಎಂದು ಗಲಿಬಿಲಿಗೆ ಒಳಗಾದರು.

**ವಚನ 11.** ಯೇಸು ಅದಕ್ಕೆ ಉತ್ತರವಾಗಿ, **ಎಲೀಯನು ಬರುವದು ನಿಜ; ಆತನು ಬಂದು ಎಲ್ಲವನ್ನು ಸರಿಮಾಡುವನು** ಎಂದು ಹೇಳಿದನು. ಆತನ ವಿಮರ್ಶೆ ಆತನು ಶಾಸ್ತ್ರಿಗಳ ತತ್ವವನ್ನು ಒಪ್ಪಿಕೊಳ್ಳುತ್ತಾನೆ ಎಂದು ತೋರಿಸುತಿತ್ತು. ಇದು ಪ್ರವಾದಿಯಾದ ಮಲಾಕಿ, "ಎಲೀಯನು ಬರುವನು ಮತ್ತು ಅವನು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು" ಎಂಬ ಹೇಳಿಕೆಯನ್ನು ದೃಢೀಕರಿಸುವದಾಗಿತ್ತು (ಮಲಾಕಿಯ 4:6). "ಎಲ್ಲವನ್ನು ಸರಿಮಾಡುವನು" ಕ್ರೈಸ್ತ ಯುಗವನ್ನು ತೆಗೆದುಕೊಂಡು ಬರುವದು ಎಂದು ಉಲ್ಲೇಖಿಸುವದಿಲ್ಲ, ಈ ಅರ್ಥೈಸುವಿಕೆ ಎಲೀಯನ ಕಾರ್ಯಗಳನ್ನು ಮತ್ತು ಮೆಸ್ಸೀಯನು ಮಾತ್ರ ಮಾಡುವ ಕಾರ್ಯಗಳನ್ನು ಚಿತ್ರಿಸುವದಾಗಿತ್ತು. ಬದಲಾಗಿ, "ಎಲ್ಲವನ್ನು ಸರಿಮಾಡುವನು" ಇದು ಮೆಸ್ಸೀಯನಿಗಾಗಿ ಆತನು ಮಾಡುವ ಪೂರ್ವ ಸಿದ್ಧ ತೆಯ ಕಾರ್ಯಗಳು ಅವುಗಳ ಫಲಿತಾಂಶವೇ ಪಶ್ಚಾತ್ತಾಪ ಮತ್ತು ಆತ್ಮೀಕತೆಯ ಪುನರುಜ್ಜೀ ವನ ವಾಗಿದ್ದವು.[12]

**ವಚನ 12.** ಯೇಸು ನಂತರ ವಿಷಯವನ್ನು ಸ್ಪಷ್ಟಗೊಳಿಸಿದನು: **ಆದರೆ ನಾನು ನಿಮಗೆ ಹೇಳುವದೇನೆಂದರೆ, ಎಲೀಯನು ಬಂದು ಹೋದನು; ಜನರು ಅವನ ಗುರುತು ಅರಿಯದೆ ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು.** ಕರ್ತನು ಸಾಮಾನ್ಯ ತತ್ವದ ವಿಶಿಷ್ಟವಾದ ಅಳವಡಿಸುವಿಕೆಯಲ್ಲಿ ಶಾಸ್ತ್ರಿಗಳನ್ನು ಒಪ್ಪಲಿಲ್ಲ. ಅವರು ಹಳೆ ಒಡಂಬಡಿಕೆಯ ಪ್ರವಾದಿಯು ತಿರುಗಿ ಕಾಣಿಸಿಕೊಳ್ಳುತ್ತಾನೆ ಎಂದು ನಿರೀಕ್ಷಿಸುತ್ತಿದ್ದರು (ನೋಡಿರಿ ಯೋಹಾನ 1:19, 21), ಆದರೆ ದೇವರು ಸ್ನಾನಿಕನಾದ ಯೋಹಾನನನ್ನು [ಕ್ರಿಸ್ತನಿಗಿಂತ] ಮೊದಲು "ಆತ್ಮದಲ್ಲಿ ಮತ್ತು ಎಲೀಯನ ಬಲದಲ್ಲಿ ಪ್ರವಾದಿಯನ್ನು ಕಳುಹಿಸಿದ್ದನು" (ಲೂಕ 1:17). "ಎಲೀಯನು" (ಸ್ನಾನಿಕನಾದ ಯೋಹಾನನು) ಯೆಹೂದ್ಯ ನಾಯಕರು ಆತನ ಪಶ್ಚಾತ್ತಾಪದ ಕರೆಯನ್ನು ನಿರಾಕರಿಸಿದರು (3:7-10; 11:16-18; 21:25). ಯೋಹಾನನು ನೀತಿವಂತ ಮನುಷ್ಯನಾಗಿದ್ದರೂ, ಹೆರೋದನು ಅವನನ್ನು ಬಂಧಿಸಿ ಅಂತಿಮವಾಗಿ ಮರಣಕ್ಕೆ ವಿಧಿಸಿದನು (14:3-12). ಯೇಸು ಸಹ ಅದೇ ಸಂಕಟ ಹೊಂದುವೆನು ಎಂದು ಹೇಳಿದನು.

**ವಚನ 13.** ಯೇಸುವಿನ ವಿವರಣೆಯ ನಂತರ, **ಆಗ ಸ್ನಾನಿಕನಾದ ಯೋಹಾನನ ವಿಷಯವಾಗಿ ತಮಗೆ ಈ ಮಾತನ್ನು ಹೇಳಿದನೆಂದು ಶಿಷ್ಯರು ತಿಳುಕೊಂಡರು.** ಆತನು ಸ್ನಾನಿಕನಾದ ಯೋಹಾನನ ಗುಣಲಕ್ಷಣಗಳನ್ನು ಹಿಂದಿನ ಸಂದರ್ಭದಲ್ಲಿ ಚರ್ಚಿಸಿದಾಗ

ಕರ್ತನು, "ನಿಮಗೆ ಮನಸ್ಸಿನದ್ದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ ಎಂದು ಹೇಳಿದನು" (11:14). ಪೇತ್ರನು, ಯಾಕೋಬನು, ಮತ್ತು ಯೋಹಾನರು ಬೆಟ್ಟವನ್ನು ಇಳಿಯುತ್ತಿರುವಾಗ ಈ ಮಾತುಗಳನ್ನು ಪುನಃ ಮಾತಾಡಿಕೊಂಡರು.

## ಪಾಠಗಳು

## ದೇವರಿಗೆ ನಮ್ಮ ಸೇವೆ (ಅಧ್ಯಾಯ 17)

1. *ಕೆಲವೊಂದು ಸಮಯದಲ್ಲಿ ದೇವರಿಗೆ ನಮ್ಮ ಸೇವೆ ಪರಲೋಕ ರಾಜ್ಯವನ್ನು ಒಳಗೊಂಡಿರುತ್ತದೆ* (17:1-13). ಬೆಟ್ಟದ ಮೇಲೆ ಯೇಸುವಿನ ಮಹಿಮೆಯ ಸರ್ವೋತ್ಕೃಷ್ಟವಾದ ಸಂಗತಿಯಾಗಿತ್ತು. ನಾವು ಇಂಥಹಾ ದೃಶ್ಯವನ್ನು ಅನುಭವಿಸಿಲ್ಲ, ದೇವರ ವಾಕ್ಯದ ಧ್ಯಾನ ಪರಲೋಕ ಸಾಮ್ರಾಜ್ಯದ ಯೋಚನೆಗಳನ್ನು ನಮಗೆ ನೀಡುತ್ತದೆ. ನಮ್ಮ ಮನಸ್ಸುಗಳು ಪರಲೋಕದಲ್ಲಿರುವ ನಿತ್ಯಜೀವದ ಯೋಚನೆಗಳಿಂದ ತುಂಬಲ್ಪಟ್ಟಿರಬೇಕು (2 ಕೊರಿಂಥ 4:16; 5:1-7; 2 ಪೇತ್ರ 3:13).

2. *ದೇವರಿಗೆ ನಮ್ಮ ಸೇವೆ ಭೌತಿಕವಾದ ಮತ್ತು ಭೂಲೋಕದ ಸಾಮ್ರಾಜ್ಯವನ್ನು ಒಳಗೊಂಡಿರುತ್ತದೆ* (17:14-23). ಮೂರು ಜನ ಅಪೊಸ್ತಲು ಬೆಟ್ಟದ ಮೇಲೆ ಉಳಿಯಲಿಲ್ಲ. ಅವರು ಬೆಟ್ಟದ ಮೇಲಿನ ಅತ್ಯಾನಂದವನ್ನು ಬಿಟ್ಟು ಲೋಕದ ಗುಲಾಮಗಿರಿಗೆ ಹಿಂತಿರುಗಬೇಕಾಗಿತ್ತು. ಅದರಂತೆ ನಾವು ಸಹ ನಮ್ಮ ಪ್ರತಿನಿತ್ಯದ ಅವಶ್ಯಕತೆಗಳಿಗಾಗಿ ಈ ಲೋಕದಲ್ಲಿ ಇರಬೇಕಾಗಿದೆ. ಒಂದು ಸಭೆಯ ಸಭಾಂಗಣದ ಬಾಗಿಲ ಮೇಲೆ ಇರುವ ಸಂಕೇತ ಹೀಗಿದೆ, "ಆರಾಧನೆಗೆ ಪ್ರವೇಶಿಸು; ಸೇವೆಗಾಗಿ ಹೊರಕ್ಕೆ ಹೋಗಿರಿ."

3. *ದೇವರಿಗೆ ನಮ್ಮ ಸೇವೆ ನ್ಯಾಯಸಮ್ಮತವಾದ ರಾಜಕೀಯ ಕ್ಷೇತ್ರವನ್ನು ಒಳಗೊಂಡಿರುತ್ತದೆ* (17:24-27). ಯೇಸುವಿನ ಬೋಧನೆಯಲ್ಲಿ ಒಳಗೊಂಡಿರುವ ತೆರಿಗೆ ಕೊಡುವದು ಆತನ ಇತರ ಬೋಧನೆಗಳು ಮತ್ತು ಉದಾಹರಣೆಗಳೊಂದಿಗೆ ಏಕರೂಪವಾಗಿದೆ (22:21). ಪೌಲನು ಸಹ ಆಡಳಿತದ ವರ್ಗದವರಿಗೆ ವಿಧೇಯರಾಗಬೇಕೆಂಬ ಇದೇ ತತ್ವವನ್ನು ಬೋಧಿಸುತ್ತಾನೆ (ರೋಮಾಪುರ 13:1-7). ಕ್ರೈಸ್ತರಾದ ನಮಗೆ ಯಾವುದೇ ರಾಜಕೀಯ ಅಧಿಕಾರ ಇದ್ದಾಗ್ಯೂ ಉತ್ತಮ ನಾಗರೀಕರಾಗಿರಬೇಕೆಂಬ ಬದ್ಧತೆಯಿದೆ, ಪೌಲನು ತನ್ನ ನಾಗರೀಕತೆಯನ್ನು ಕಾಪಾಡಿಕೊಂಡನು ಮತ್ತು ತನಗೆ ನ್ಯಾಯಸಮ್ಮತವಾಗಿ ದೊರೆಯಬೇಕಾದ ಹಕ್ಕುಗಳಿಗಾಗಿ ಮನವಿ ಮಾಡಿಕೊಂಡನು (ಅಪೊಸ್ತಲರ ಕೃತ್ಯಗಳು 25:11).

## ಯೇಸುವಿನ ರೂಪಾಂತರ (17:1-8)

ಯೇಸುವಿನ ರೂಪಾಂತರ ವಿವಿಧ ವಿಷಯಗಳ ಮೇಲೆ ಕನಿಷ್ಟ ಐದು ಸಂಗತಿಗಳನ್ನು ಬೋಧಿಸುತ್ತದೆ.

1. *ಹಳೆ ಒಡಂಬಡಿಕೆ ಬೇಗನೆ ರದ್ದಾಗಿ ಹೊಸ ಒಡಂಬಡಿಕೆಯಿಂದ ಸ್ಥಳಾಂತರವಾಗುತ್ತದೆ.* "ಹಳತಾಗಿ ಮತ್ತು ವಯಸ್ಸಾಗುತ್ತಾ ಹೋಗುತ್ತದೆ" ಮತ್ತು "ಕಣ್ಮರೆಯಾಗಲು ಸಿದ್ಧವಾಗುತ್ತದೆ" (ಇಬ್ರಿಯ 8:13). ಅದು ಬೇಗನೇ ಹೊಸ ಒಡಂಬಡಿಕೆಯೊಂದಿಗೆ ಸ್ಥಳಾಂತರಿಸಲಾಗುತ್ತದೆ, ಅದರಲ್ಲಿ ಎಲ್ಲಾ ಜನರನ್ನು ಸೇರಿಸಿಕೊಳ್ಳಲಾಗುತ್ತದೆ (ಇಬ್ರಿಯ 8:7-12).

2. *ನಾವು ಮರಣಹೊಂದುವಾಗ ಜೀವಿಸುವದು ನಿಂತುಹೋಗುವದಿಲ್ಲ.* ಇದು ಬೆಟ್ಟದ ಮೇಲೆ ಮೋಶೆ ಮತ್ತು ಎಲೀಯನ ಪ್ರತ್ಯಕ್ಷತೆಯ ಮೂಲಕ ತೋರಿಸಲಾಗಿದೆ (ಪ್ರಸಂಗಿ 12:5). ಮರಣವು ದೈಹಿಕ ಸ್ಥಿತಿಯಿಂದ ಆತ್ಮೀಕ ಸ್ಥಿತಿಗೆ ಬದಲಾವಣೆಯಾಗಿದೆ (ಪ್ರಸಂಗಿ 12:7; ಯಾಕೋಬ 2:26). ಆತ್ಮಿಕ ಮರಣವು ದೇವರಿಂದ ಬೇರ್ಪಡಿಸುವದಾಗಿದೆ (2 ಥೆಸಲೋನಿಕ 1:9).

3. *ಮರಣಹೊಂದುವಾಗ ನಾವು ನಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುವದಿಲ್ಲ.* ಪೇತ್ರ, ಯಾಕೋಬ, ಮತ್ತು ಯೋಹಾನರು ಮೋಶೆ ಮತ್ತು ಎಲೀಯನನ್ನು ಗುರುತಿಸಲು ಹೇಗೆ ಸಾಧ್ಯವಾಯಿತು ಎಂಬುದು ತಿಳಿದಿಲ್ಲ; ಆದರೆ ನಾವು ಈ ಸಂಧಿಸುವಿಕೆಯಿಂದ ಮೋಶೆ ಇನ್ನೂ ಮೋಶೆಯೇ ಆಗಿದ್ದಾನೆ ಮತ್ತು ಎಲೀಯನು ಇನ್ನೂ ಎಲೀಯನೇ ಆಗಿದ್ದಾನೆ. ಭಿಕ್ಷುಕನಾದ ಲಾಜರನು ಈಗಲೂ ಅಬ್ರಹಾಮನ ಎದೆಗೆ ಒರಗಿರುತ್ತಾನೆ ಮತ್ತು ಐಶ್ವರ್ಯವಂತನೂ ಈಗಲು ಬೆಂಕಿಯಲ್ಲಿ ಸಂಕಟಪಡುತ್ತಿದ್ದಾನೆ (ಲೂಕ 16:19-31). ಪೌಲನು ಭಾಲೋಕದಲ್ಲಿ ತಾನು ಯಾರನ್ನು ತಿಳಿದಿದ್ದಾನೋ ಅವರನ್ನು ಪರಲೋಕದಲ್ಲಿ ತಿಳಿದಿರುತ್ತಾನೆ ಎಂಬ ನಿರೀಕ್ಷೆಯನ್ನು ಹೊಂದಿದವನಾಗಿದ್ದಾನೆ (2 ಕೊರಿಂಥ 4:14; 1 ಥೆಸಲೋನಿಕ 2:19, 20). ಆತನು ಭವಿಷ್ಯತ್ತಿನಲ್ಲಿ ಗುರುತಿಸುವ ಕಲ್ಪನೆಯನ್ನು ಥೆಸಲೋನಿಕದವರನ್ನು ಪ್ರೋತ್ಸಾಹಿಸಲು ಉಪಯೋಗಿಸಿದನು (1 ಥೆಸಲೋನಿಕ 4:13-18).

4. *ಕ್ರಿಸ್ತನು ನಮ್ಮ ಆರಾಧನೆಯ ಕೇಂದ್ರವಾಗಿದ್ದಾನೆ.* ಮೋಶೆ ಮತ್ತು ಎಲೀಯ ಶ್ರೇಷ್ಟರಾಗಿದ್ದರೂ, ಅವರು ಮನುಷ್ಯರಾಗಿದ್ದರು, ಅದೇ ಸಮಯದಲ್ಲಿ ಆತನು ದೈವೀಕನಾಗಿದ್ದನು. ಅವರನ್ನು ಆರಾಧಿಸಲಾಗದು ಆದರೆ ಯೇಸುವನ್ನು ಆರಾಧಿಸಬೇಕು.

5. *ಇಂದು ಕ್ರಿಸ್ತನು ದೇವರ ವಕ್ತಾರನಾಗಿದ್ದಾನೆ.* ಮೋಶೆ ಇಸ್ರಾಯೇಲಲಿಗೆ ಅವರು ವಾಗ್ದಾತ್ತ ದೇಶವನ್ನು ಪ್ರವೇಶಿಸುವ ಪೂರ್ವದಲ್ಲಿ ದೇವರ ವಕ್ತಾರನಾಗಿದ್ದನು (ವಿಮೋಚನಕಾಂಡ 3; 4); ಮತ್ತು ಎಲೀಯನು, ಶ್ರೇಷ್ಟ ಮೌಖಿಕ ಪ್ರವಾದಿಯಾಗಿದ್ದನು, ಯೆಹೂದ್ಯ ಮತ್ತು ಇಸ್ರಾಯೇಲಲಿಗೆ ದೇವರ ವಕ್ತಾರನಾಗಿದ್ದನು. ರೂಪಾಂತರ ಬೆಟ್ಟದಲ್ಲಿ ದೇವರ ಪ್ರಕಟಣೆ ನಾವು ಜೀವಿಸುತ್ತಿರುವ ಯುಗದಲ್ಲಿ ಯೇಸು ಮಾತ್ರ ದೇವರ ವಕ್ತಾರನೆಂಬುದನ್ನು ಸಿದ್ಧಾಂತಪಡಿಸುತ್ತದೆ (17:5; ಇಬ್ರಿಯ 1:1, 2). ನಂತರ ಅವಧಿಯಲ್ಲಿ ಪ್ರವಾದಿಗಳಿಗೆ ದೇವರಿಗಾಗಿ ಮಾತನಾಡುವ ಅಧಿಕಾರವಿರಲಿಲ್ಲ, ಮತ್ತು ಮುಂದಿನ ದಿನಗಳಲ್ಲಿ ಮನುಷ್ಯನಿಗೆ ಪ್ರಕಟನೆಗಳು ಕೊಡಲ್ಪಡಲಿಲ್ಲ (ಯೂದ 3).

## ಮರಣವು ಅದು ಬಿಟ್ಟು ಹೋಗುವಂಥದ್ದು (17:3)

ಆತನು ರೂಪಾಂತರ ಹೊಂದುತ್ತಿರುವ ಹಾಗೆ, ಯೇಸು ಮೋಶೆ ಮತ್ತು ಎಲೀಯನೊಂದಿಗೆ ಮಾತಾಡಿದನು. ಲೂಕ 9:31 ಅವರ ಸಂಭಾಷಣೆಯ ವಿಷಯ "ಹೊರಡುವದು" (*exodos*) ಮರಣವು ದೈಹಿಕ ಅವಸ್ಥೆಯಿಂದ ಆತ್ಮೀಕ ಅವಸ್ಥೆಗೆ ಬದಲಾಗುವದಾಗಿದೆ (ಪ್ರಸಂಗಿ 12:5, 7; ಫಿಲಿಪ್ಪಿ 1:19-21). ಕ್ರೈಸ್ತರಿಗೆ, ಮರಣವು ವಿಸ್ಮರಣೆಯ ಪ್ರಯಾಣವಲ್ಲ ಆದರೆ ನಶಿಸಿಹೋಗುವ ಇಹಲೋಕದ ಈ ದೇಹದ ಬಂಧನದಿಂದ ಬಿಡುಗಡೆಹೊಂದುವದಾಗಿದೆ (ಯೋಹಾನ 14:1-6; 2 ಕೊರಿಂಥ 5:1-4). ಮೋಶೆ ಮತ್ತು ಎಲೀಯ ಆತನಿಗೆ ಏನನ್ನು ಮಾಡಿದರೋ ಅದನ್ನು ಯೇಸು ನಮಗೆ ಅದಕ್ಕೂ ಹೆಚ್ಚಾದ್ದನ್ನು ಮಾಡಿದ್ದಾನೆ. ಮರಣದ ಮೇಲೆ ಜಯವನ್ನು ಸಾಧಿಸಿ, ಆತನು ನಮಗೆ ಒಬ್ಬ ವ್ಯಕ್ತಿ ಮರಣಹೊಂದಿದರೂ ತಿರುಗಿ ಜೀವಿಸಬಹುದು, ಸಮಾಧಿ ನಮ್ಮನ್ನು ಹಿಡಿದಿಡಲು ಸಾಧ್ಯವಿಲ್ಲ ಎಂಬ ಭರವಸೆಯನ್ನು ನೀಡಿದ್ದಾನೆ (1 ಕೊರಿಂಥ 15:50-58). ಯಾಕೆಂದರೆ ಆತನು ನಮ್ಮ ಕೊನೆಯ ವೈರಿಯನ್ನು ಜೈಹಿಸಿದ್ದಾನೆ, ಆ ಜಯದಲ್ಲಿ ನಾವು ಪಾಲು ಹಂಚಿಕೊಳ್ಳಬಹುದು (1 ಕೊರಿಂಥ 15:25, 26).

## ಬರಲಿಕ್ಕಿರುವ ಎಲೀಯನು (17:9-13)

ಶಿಷ್ಯರು ಯೇಸುವನ್ನು ಶಾಸ್ತ್ರಿಗಳು "ಎಲೀಯನು ಮೊದಲು ಬರುವನು" (17:10) ಎಂದು ಹೇಳುತ್ತಾರಲ್ಲ ಎಂದು ಕೇಳಿದಾಗ, ಅವರ ಪ್ರಶ್ನೆ ರಬ್ಬಿಯ ಸಂಪ್ರದಾಯಕ್ಕಿಂತ ಹೆಚ್ಚಾಗಿತ್ತು. ಅವರು ಮಲಾಕಿಯನ ಪ್ರವಾದನೆಯ ಕುರಿತು ಕೇಳಿದರು (ಮಲಾಕಿಯ 4:5, 6).

ಯೇಸು ಅವರಿಗೆ, "ಎಲೀಯ ಈಗಾಗಲೇ ಬಂದನು, ಮತ್ತು ಅವರು ಆತನ ಗುರುತ್ತನ್ನು

ಹಿಡಿಯಲಿಲ್ಲ" ಎಂದು ಹೇಳಿದನು (17:12). "ಶಿಷ್ಯರು ಅವನು ಸ್ನಾನಿಕನಾದ ಯೋಹಾನ ವಿಷಯವಾಗಿ ಮಾತನಾಡಿದನು ಎಂದು ತಿಳಿದುಕೊಂಡರು" (17:13). ಯೇಸು ಅವರಿಗೆ ಈ ಹಿಂದೆ ಯೋಹಾನನ ಬರಬೇಕಾದ ಎಲೀಯನಾಗಿದ್ದಾನೆ ಎಂದು ಹೇಳಿದ್ದನು (11:14). ಯೋಹಾನನ ತಂದೆ ಜಕರೀಯನಿಗೆ ಒಬ್ಬ ದೇವದೂತನು "ನಿನ್ನ ಮಗನು ಎಲೀಯನ ಗುಣ ಶಕ್ತಿಗಳಿಂದ ಕೂಡಿದವನಾಗಿರುವನು" ಎಂದು ಹೇಳಿದನು (ಲೂಕ 1:17). ಹಾಗಿದ್ದಲ್ಲಿ, ಯಾಕೆ, ಯೋಹಾನನು ತಾನು ಎಲೀಯನಲ್ಲವನೆಂದು ಹೇಳಿದನು (ಯೋಹಾನ 1:21)? ಯೋಹಾನನು ಎಲೀಯನು ಪ್ರವಾದಿಸಿದ ಆತ್ಮನಿಂದ ಪ್ರವಾದಿಸಿದನು, ಆದರೆ ಆತನು ನಿಜವಾಗಿ, ತಿರುಗಿ ಹುಟ್ಟಿದ ಎಲೀಯನಲ್ಲ.

---

ಟಿಪ್ಪಣಿಗಳು

[1]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 262. [2]ನೋಡಿರಿ Josephus *Wars* 2.20.6; 4.1.8. [3]"ರೂಪಾಂತರ" ಎಂಬ ಆಂಗ್ಲ ಪದವು Latin Vulgate (*transfiguratus est*) ನಿಂದ ಪ್ರಭಾವಿತವಾಗಿದೆ. (Jack P. Lewis, *A Commentary on the Gospel According to Matthew,* Part 2, The Living Word Commentary [Austin, Tex.: Sweet Publishing Co., 1976], 44.) [4]Michael J. Wilkins, "Matthew," in *Zondervan Illustrated Bible Backgrounds Commentary, vol. 1, Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 106. [5]ಇನ್ನೊಬ್ಬ ವೈಯಕ್ತಿಕ ವ್ಯಕ್ತಿ ಹನೋಕ ಆಗಿದ್ದನು (ಆದಿಕಾಂಡ 5:24). [6]*Deuteronomy Rabbah* 3.17. ಮೋಶೆಯು ಮತ್ತೆ ಬರುವನೆಂಬ ಯೆಹೂದ್ಯರ ನಿರೀಕ್ಷಿಸುವಿಕೆ ಬಹಳ ಕಡಿಮೆಯಾಗಿತ್ತು, ಆದರೆ ಅನೇಕ ವಾಕ್ಯಭಾಗಗಳು ಎಲೀಯನ ಬರುವಿಕೆಯನ್ನು ಸೂಚಿಸುತ್ತವೆ (ನೋಡಿರಿ ಮೇಲಿನ ವ್ಯಾಖ್ಯಾನ 11:14; 17:10–12). ಎಲೀಯನ ಬರುವಿಕೆಯ ಕುರಿತಾಗಿ ವಿಸ್ತಾರವಾದ ದಾಖಲೆಗಾಗಿ ನೋಡಿರಿ Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 439–40, n. 122. [7]ನೋಡಿರಿ ವಿಮೋಚನಕಾಂಡ 13:21, 22; 16:10; 24:15–18; 40:34–38; ಅರಣ್ಯಕಾಂಡ 9:17; 11:25; ಧರ್ಮೋಪದೇಶಕಾಂಡ 1:33; 5:22; 1 ಅರಸುಗಳು 8:10–13. [8]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 344. [9]ನೋಡಿರಿ Donald A. Hagner, *Matthew 14—28,* Word Biblical Commentary, vol. 33B (Dallas: Word Books, 1995), 493. [10]Sirach 48:10, 11; Mishnah *Eduyoth 8.7; Sotah 9.15; Baba Mesia 3.4, 5;* Talmud *Erubin* 43b. ನೋಡಿರಿ John Lightfoot, *A Commentary on the New Testament from the Talmud and Hebraica: Matthew—1 Corinthians, vol. 2, Matthew—Mark* (Oxford University Press, 1859; reprint, Grand Rapids, Mich.: Baker, 1979), 244–46.

[11]ನೋಡಿರಿ Justin Martyr *Dialogue with Trypho* 8; 49. [12]Hagner, 499.